# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 56 (36) |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. |
| ಉತ್ತರಿಸುವ ದಿನಾಂಕ | : | 04-12-2023 |
| ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರ ಅರಣ್ಯ ಒತ್ತುವರಿ ಪ್ರಕರಣಗಳನ್ನು ಸರಿಯಾಗಿ ನಿರ್ವಹಿಸದ ಕಾರಣದಿಂದಾಗಿ ಹಲವಾರು ಅರ್ಹ ಅರಣ್ಯ ಒತ್ತುವರಿದಾರರಿಗೆ ಹಲವಾರು ದಶಕಗಳಿಂದ ಸತತವಾಗಿ ಸಾಕಷ್ಟು ತೊಂದರೆಯಾಗುತ್ತಾ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ದಿನಾಂಕ 27.04.1978ರ ಪೂರ್ವದ ಅತಿಕ್ರಮಣ ಪ್ರಕರಣಗಳನ್ನು ಸಕ್ರಮಗೊಳಿಸಲು ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು ಈ ಕೆಳಕಂಡಂತೆ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಅನುಮೋದನೆ ನೀಡಿರುತ್ತದೆ.
<table>
<tr><th>ಕ್ರ.ಸಂ</th><th>ವಿವರ</th><th>ಕುಟುಂಬಗಳ ಸಂಖ್ಯೆ</th><th>ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ</th></tr>
<tr><td>1</td><td>ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ</td><td>21569</td><td>17007.23</td></tr>
<tr><td>2</td><td>ಭಾರತ ಸರ್ಕಾರದಿಂದ ಅನುಮೋದನೆ ಪಡೆದಿರುವುದು</td><td>19348</td><td>14848.83</td></tr>
<tr><td>3</td><td>ಜಿಲ್ಲಾಧಿಕಾರಿಗಳಿಂದ ಸಕ್ರಮಗೊಂಡಿರುವುದು</td><td>7828</td><td>5234.10</td></tr>
<tr><td>4</td><td>ಜಿಲ್ಲಾಧಿಕಾರಿಗಳಿಂದ ತಿರಸ್ಕೃತಗೊಂಡಿರುವುದು</td><td>5259</td><td>4735.35</td></tr>
<tr><td>5</td><td>ಜಿಲ್ಲಾಧಿಕಾರಿಗಳಿಂದ ಸಕ್ರಮಾತಿಗೊಳ್ಳಲು ಬಾಕಿ ಇರುವುದು</td><td>6261</td><td>4879.38</td></tr>
</table></td></tr>
<tr><td>ಆ)</td><td>ಬಂದಿದ್ದಲ್ಲಿ, ರಾಜ್ಯದಲ್ಲಿ ಅರಣ್ಯ ಒತ್ತುವರಿ ಸಮಸ್ಯೆ ಪರಿಹರಿಸುವ ಸಲುವಾಗಿ ಸರ್ಕಾರ ರೂಪಿಸಿರುವ ನಿಯಮ, ಮಾನದಂಡ ಮತ್ತು ಕಾನೂನು ಕ್ರಮಗಳೇನು;</td><td>ಸರ್ಕಾರದ ಸುತ್ತೋಲೆ ಸಂಖ್ಯೆ:ಅಪಜೀ 45 ಎಫ್ ಜಿಎಲ್ 2015 ದಿನಾಂಕ 13.03.2015ರಲ್ಲಿ ಅರಣ್ಯ ಒತ್ತುವರಿ ಮತ್ತು ಆತನ ಪಟ್ಟಾ ಜಮೀನು ಸೇರಿ ಮೂರು ಎಕರೆಗಿಂತ ಕಡಿಮೆ ಇರುವ ಒತ್ತುವರಿದಾರರಿಗೆ ಪುನರ್ ವಸತಿ ಯೋಜನೆಯನ್ನು ಕಲ್ಪಿಸುವ ಪೂರ್ವದಲ್ಲಿ ಅವರನ್ನು</td></tr>
</table>

| | | |
|---|---|---|
| | | ಒಕ್ಕಲೆಬ್ಬಿಸಬಾರದು ಎಂದು ಸೂಚನೆ ನೀಡಲಾಗಿದ್ದು, ದಿನಾಂಕ 28.06.2016ರಲ್ಲಿ ಇದೇ ಸೂಚನೆಯನ್ನು ಪುನರುಚ್ಚಿಸಲಾಗಿದೆ.<br><br>ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64(ಎ)ರ ಪ್ರಕಾರ ಒತ್ತುವರಿದಾರರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಿ ಒತ್ತುವರಿದಾರರನ್ನು ತೆರವುಗೊಳಿಸಲು ನಿರಂತರವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಕಳೆದ ಒಂಬತ್ತು ವರ್ಷಗಳಲ್ಲಿ ಅರಣ್ಯ ಇಲಾಖೆಯಲ್ಲಿ ಒತ್ತುವರಿ ತೆರವುಗೊಳಿಸಿರುವ ವಿವರಗಳನ್ನು **ಅನುಬಂಧದಲ್ಲಿ ಲಗತ್ತಿಸಿದೆ.**<br><br>ಸರ್ಕಾರದ ಹಂತದಲ್ಲಿ ಅರಣ್ಯ ಒತ್ತುವರಿ ತೆರವುಗೊಳಿಸಲು ಕಾರ್ಯಪಡೆ ರಚಿಸಲು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ. |
| ಇ) | ಅರಣ್ಯ ಒತ್ತುವರಿಗೆ ಕೆಲವು ಷರತ್ತುಗಳನ್ನು ವಿಧಿಸಿ ಸಕ್ರಮಗೊಳಿಸಲು 1996 ರಲ್ಲಿ ಕೇಂದ್ರ ಸರ್ಕಾರ ಅನುಮತಿ ನೀಡಿದ ನಂತರ ಆ ಕುರಿತು ಎಷ್ಟು ಪ್ರಸ್ತಾವನೆಗಳನ್ನು ಸಕ್ರಮಗೊಳಿಸಲು ಅನುಮತಿ ಕೋರಿ ಸಲ್ಲಿಸಲಾಗಿತ್ತು; | ಅರಣ್ಯ ಒತ್ತುವರಿ ಸಕ್ರಮಾತಿಗಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ 21569 ಪ್ರಕರಣಗಳನ್ನು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು 19348 ಪ್ರಕರಣಗಳಿಗೆ ಮಾತ್ರ ಮಂಜೂರಾತಿ ನೀಡಿರುತ್ತದೆ. |
| ಈ) | ಈ ಬಗ್ಗೆ ಸಲ್ಲಿಸಲಾದ ಎಲ್ಲಾ ಪ್ರಸ್ತಾವನೆಗಳನ್ನು ಈಗಾಗಲೇ ಸರ್ಕಾರವು ಸಕ್ರಮಗೊಳಿಸಲಾಗಿದೆಯೇ | ಅರಣ್ಯ ಒತ್ತುವರಿಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಕೆಲವು ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿದ ಪ್ರಕರಣಗಳಲ್ಲಿ ಜಿಲ್ಲಾಧಿಕಾರಿಗಳು 7828 ಪ್ರಕರಣಗಳನ್ನು ಸಕ್ರಮಗೊಳಿಸಿರುತ್ತಾರೆ. ಉಳಿದ ಪ್ರಕರಣಗಳು ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ. |
| ಉ) | ಈ ಎಲ್ಲಾ ಪ್ರಸ್ತಾವನೆಗಳನ್ನು ಈವರೆವಿಗೂ ಸಕ್ರಮಗೊಳಿಸದಿದ್ದಲ್ಲಿ ಕಾರಣಗಳೇನು? | ಅರ್ಹ ಅರ್ಜಿದಾರರು ಪೂರಕ ದಾಖಲೆಗಳನ್ನು ಸಲ್ಲಿಸದಿರುವುದರಿಂದ ಜಿಲ್ಲಾಧಿಕಾರಿಗಳ ಹಂತದಲ್ಲಿ ಮಂಜೂರಾತಿಯು ಪ್ರಕ್ರಿಯೆಯಲ್ಲಿದೆ. |

**ಸಂಖ್ಯೆ: ಎಫ್‌ಇಇ 65 ಎಫ್‌ಜಿಎಲ್ 2023**

(signature)

**(ಈಶ್ವರ ಬಿ ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

# ಅನುಬಂಧ

## ಅರಣ್ಯ ಇಲಾಖೆಯಲ್ಲಿ ಕಳೆದ 09 ವರ್ಷಗಳಲ್ಲಿ ಒತ್ತುವರಿ ತೆರವುಗೊಳಿಸಿರುವ ವಿವರಗಳು

| ಕ್ರಸಂ | ವರ್ಷ | ಪ್ರಕರಣಗಳ ಸಂಖ್ಯೆ | ಒತ್ತುವರಿ ತೆರವುಗೊಳಿಸಿದ ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | 2014-15 | 1682 | 3593.133 |
| 2 | 2015-16 | 1302 | 5313.49 |
| 3 | 2016-17 | 848 | 8009.16 |
| 4 | 2017-18 | 665 | 2844.77 |
| 5 | 2018-19 | 1875 | 4812.47 |
| 6 | 2019-20 | 153 | 400.76 |
| 7 | 2020-21 | 34 | 490.45 |
| 8 | 2021-22 | 28 | 147.61 |
| 9 | 2022-23 | 24 | 155.49 |
| | ಒಟ್ಟು | **6611** | **25767.333** |